ಹಾಸನ ಜಿಲ್ಲೆಯಲ್ಲಿರುವ ಅರಣ್ಯ ಭೂಮಿಯಲ್ಲಿ ಒತ್ತುವರಿ ಮಾಡಿರುವ ಪ್ರಕರಣಗಳು.

553:(3947)

ಶ್ರೀ ಬಿ.ಶಿವರಾಮು (ಗಂಡಸಿ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಹಾಸನ ಜಿಲ್ಲೆಯಲ್ಲಿರುವ ಅರಣ್ಯ ಭೂಮಿಯಲ್ಲಿ ಒತ್ತುವರಿ ಮಾಡಿರುವ ಪ್ರಕರಣಗಳ ಸಂಖ್ಯೆ:ಎಷ್ಟು:ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ವಿಸ್ತೀರ್ಣದ ಜಮೀನು ಒತ್ತುವರಿಯಾಗಿದೆ; (ಪೂರ್ಣ ಮಾಹಿತಿ ಒದಗಿಸುವುದು)

ಆ) ಅರಣ್ಯ ಇಲಾಖೆ ಭೂಮಿಯಲ್ಲಿ ಕಂದಾಯ ಇಲಾಖೆಯವರು ಮಂಜೂರಾತಿ ಮಾಡಿರುವ ಪ್ರಕರಣಗಳೇನಾದರೂ ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಡಿ.ಮಂಜುನಾಥ (ಅರಣ್ಯ ಸಚಿವರು):

ಅ) ಹಾಸನ ಜಿಲ್ಲೆಯಲ್ಲಿರುವ ಅರಣ್ಯ ಭೂಮಿಯಲ್ಲಿ ಒತ್ತುವರಿ ಮಾಡಿರುವ ಪ್ರಕರಣಗಳು ಒಟ್ಟು 1837 ಸಂಖ್ಯೆ: ತಾಲ್ಲೂಕುವಾರು ವಿವರಗಳ ಪಟ್ಟಿ ಲಗತ್ತಿಸಿದೆ.

ಆ) ಹಾಸನ ವಿಭಾಗದ ಅರಕಲುಗೂಡು, ಬೇಲೂರು ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಅರಣ್ಯ ಪ್ರದೇಶಗಳ ಜಮೀನನ್ನು ಕಂದಾಯ ಇಲಾಖೆಯವರು ದರಖಾಸ್ತು ಮಂಜೂರು ಮಾಡಿರುವುದು ಕಂಡು ಬಂದಿದೆ.

ಇ) ಸಂಬಂಧಪಟ್ಟ ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಗಳಿಗೆ, ಅರಣ್ಯ ಜಮೀನನ್ನು ಕಂದಾಯ ಇಲಾಖೆಯವರು ಮಂಜೂರು ಮಾಡಿರುವುದು ಅರಣ್ಯ (ಸಂರಕ್ಷಣಾ) ಕಾಯ್ದೆ 1980ರ ಉಲ್ಲಂಘನೆಯಾಗಿರುವುದನ್ನು ಅವರುಗಳ ಗಮನಕ್ಕೆ ತಂದು, ಈ ರೀತಿ ಮಂಜೂರು ಮಾಡಿರುವುದನ್ನು ವಜಾ ಮಾಡಲು ತಿಳಿಸಿದೆ.

ಹಾಸನ ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶಗಳಲ್ಲಿರುವ ತಾಲ್ಲೂಕುವಾರು ಒತ್ತುವರಿ ಪ್ರಕರಣಗಳ ಪಟ್ಟಿ

ಜಿಲ್ಲೆ	ತಾಲ್ಲೂಕು	ಒತ್ತುವರಿದಾರರ ಸಂಖ್ಯೆ	ವಿಸ್ತೀರ್ಣ
ಹಾಸನ	ಬೇಲೂರು	675	481.11
	ಅರಸೀಕೆರೆ	671	497.97
	ಅರಕಲಗೂಡು	74	48.26
	ಚನ್ನರಾಯಪಟ್ಟಣ	36	42.20
	ಸಕಲೇಶಪುರ	23	31.58
	ಹಾಸನ	358	223.92
	ಒಟ್ಟು	1837	1325.04